ಸಿ.ಸಿ ನಂಬ್ರ: 658/2024
ಪಿ.ಡಬ್ಲ್ಯೂ : 2

ದಿನಾಂಕ: 04 -02-2026 ರಂದು ಸಾಕ್ಷಿಗೆ ಪ್ರಮಾಣ ವಚನ ಮಾಡಿಸಲಾಗಿದೆ

ಪಾಟೀ ಸವಾಲು: ಆರೋಪಿ ಪರ ಶ್ರೀ ಆರ್ ಕೆ ಎಮ್ ವಕೀಲರಿಂದ

1. ನಾನು ದ್ವಿತಿಯ ಪಿಯುಸಿ ವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ . ದ್ವಿತಿಯ ಪಿಯುಸಿ ಮುಗಿದ ನಂತರ ಇಂಟರ್ ಲಾಕ್ ಹಾಗೂ ಸಿದ್ದಿ ಕ್ಯಾಶ್ಯೂ ಫ್ಯಾಕ್ಟರಿಯ ವ್ಯವಹಾರ ಮಾಡಿರುತ್ತೇನೆ. ನನಗೆ ವ್ಯವಹಾರ ಜ್ಞಾನ ಇರುತ್ತದೆ. ಲಕ್ಷಗಟ್ಟಲೆ ಹಣ ಕೊಡುವಾಗ ದಾಖಲಾತಿ ಮಾಡಿಕೊಳ್ಳಬೇಕು ಎಂಬ ವ್ಯವಹಾರ ಜ್ಞಾನ ಇದೆ ಎಂದರೆ ಸರಿ. ಈ ಪ್ರಕರಣದಲ್ಲಿ ನನಗೆ ಎಷ್ಟು ಮಾಹಿತಿ ಗೊತ್ತಿದೆಯೋ ಅದನ್ನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುತ್ತೇನೆ. ಇನ್ನು ಬೇರೆ ಏನು ಹೇಳುವುದು ಬಾಕಿ ಇರುವುದಿಲ್ಲ.

2. ಕರಾರು ಪತ್ರ ಆದ ನಂತರ ಆರೋಪಿತಳು ದೂರುದಾರನಿಗೆ ಒಂದು ಬಾರಿ 50 ಲಕ್ಷ ಇನ್ನೊಂದು ಬಾರಿ 46 ಲಕ್ಷ ಕೊಟ್ಟಿರುತ್ತಾರೆ. 50 ಲಕ್ಷವನ್ನು ಯಾವಾಗ ಕೊಟ್ಟಿರುತ್ತಾರೆ ಎಂದು ನೆನಪಿರುವುದಿಲ್ಲ, ಅವರು ನನಗೆ ಹೇಳಿರುತ್ತಾರೆ. ಕ್ರಯ ಪತ್ರ ಆದ ನಂತರ ಅದರ ಪ್ರಕಾರ ಏನಾದರೂ ಹಣ ಸಂದಾಯ ಆಗಿದ್ದರೆ ಅದನ್ನು ನನ್ನ ಗಮನಕ್ಕೆ ತರಬೇಕಿತ್ತು ಎಂದರೆ ಸರಿ. ಆ ಹಣವನ್ನು ಯಾವಾಗ ಸಂದಾಯ ಮಾಡಿರುತ್ತಾರೆ ಎಂದು ನೆನಪಿರುವುದಿಲ್ಲ. ಆ ಹಣವನ್ನು ಯಾರು ಸಂದಾಯ ಮಾಡಿರುತ್ತಾರೆ ಎಂದು ಗೊತ್ತಿರುವುದಿಲ್ಲ. ಎಲ್ಲಿ ಸಂದಾಯ ಮಾಡಿರುತ್ತಾರೆ ಎಂದು ಗೊತ್ತಿರುವುದಿಲ್ಲ. ಯಾವ ರೀತಿಯಲ್ಲಿ ಹಣ ಸಂದಾಯ ಮಾಡಿರುತ್ತಾರೆ ಎಂದು ಗೊತ್ತಿರುವುದಿಲ್ಲ. ನನಗೆ ಅದು ಯಾವಾಗ ಸಂದಾಯ ಆಗಿರುತ್ತದೆ ಎಂದು ತಿಳಿಯಲ್ಪಟ್ಟಿತ್ತು ಎಂದು ಗೊತ್ತಿರುವುದಿಲ್ಲ, ಇವತ್ತಿನನಿಂದ 1 ವರ್ಷದ ಹಿಂದೆ ಆ ಹಣವನ್ನು ಸಂದಾಯ ಮಾಡಿರುತ್ತಾರೆ. ಈ ಬಗ್ಗೆ ನಾನು ಹೆಚ್ಚಿನ ಮಾಹಿತಿಯನ್ನು ಅವರಲ್ಲಿ ಕೇಳಿರುವುದಿಲ್ಲ.

3. 50 ಲಕ್ಷ ಯಾವಾಗ ಮತ್ತು ಎಲ್ಲಿ ಕೊಟ್ಟಿರುತ್ತಾರೆ ಎಂದು ಗೊತ್ತಿರುವುದಿಲ್ಲ. 50 ಲಕ್ಷ ಕೊಟ್ಟಿರುತ್ತಾರೆ ಎಂದು ಖಚಿತಪಡಿಸಿಕೊಳ್ಳಲು ನಾನು ದಾಖಲಾತಿ ನೋಡಿರುವುದಿಲ್ಲ, ಅವರು ನನ್ನ ಬಳಿ ಹೇಳಿರುತ್ತಾರೆ. 50 ಲಕ್ಷ ಹಣ ಕೊಡುವಾಗ ನಾನು ಇರಲಿಲ್ಲ. ಆ ಕರಾರು ಪತ್ರದಲ್ಲಿ 50 ಲಕ್ಷ ರೂ. ಭಾಗಶಃ ಕೊಟ್ಟಿರುತ್ತಾರೆ ಅಂತ ಷರಾ ಬರೆದಿರುವುದಿಲ್ಲ. ಕೃಷ್ಣಯ್ಯ ಶೆಟ್ಟಿಯವರು ನನ್ನ ಬಳಿ ಬಂದು 50 ಲಕ್ಷ ಕೊಟ್ಟಿರುತ್ತಾರೆ ಎಂದು ಹೇಳಿರುತ್ತಾರೆ, ಹಾಗಾಗಿ ನಾನು ಹೇಳುತ್ತಿದ್ದೇನೆ. ನಾನು ಸುಜಾತರವರ ಬಳಿ 50 ಲಕ್ಷ ರೂ. ಯಾವಾಗಎಲ್ಲಿ ಸಂದಾಯ ಮಾಡಿರುತ್ತೀರಿ ಎಂದು ಕೇಳಿರುವುದಿಲ್ಲ.

4. ನಾನು ಹೇಳುವಂತಹ 50 ಲಕ್ಷ ಹಾಗೂ 46 ಲಕ್ಷ ಬಾರಿ ಮೊತ್ತದ ಹಣ ಎಂದರೆ ಸರಿ. 46 ಲಕ್ಷ ಹಣವನ್ನು ಯಾರು ಕೊಟ್ಟಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ಆದರೆ ದೂರುದಾರ ಕೃಷ್ಣಯ್ಯ ಶೆಟ್ಟಿ 46 ಲಕ್ಷ ಬಂದಿರುತ್ತಾರೆ ಎಂದು ಹೇಳಿರುತ್ತಾರೆ. 46 ಲಕ್ಷ ರೂ. ಕೃಷ್ಣಯ್ಯ ಶೆಟ್ಟಿಯವರಿಗೆ ಪಾವತಿ ಆದ ಬಗ್ಗೆ ಅವರು ನನಗೆ ಯಾವುದೇ ದಾಖಲಾತಿ ತೋರಿಸಿರುವುದಿಲ್ಲ. ಕರಾರು ಆದ ನಂತರ ಕರಾರಿನಲ್ಲಿ ನಮೂದಿಸಿದ ಹಣ ಯಾವ ರೀತಿ ಕೊಟ್ಟಿರುತ್ತಾರೆ ಎಂಬುದನ್ನು ತಿಳಿದುಕೊಳ್ಳಲು ನನಗೆ ಆಸಕ್ತಿ ಇರಲಿಲ್ಲ, ಅವರು ಕೊಟ್ಟಿರುತ್ತಾರೆ ಎಂದು ಹೇಳಿರುತ್ತಾರೆ.

5. 46 ಲಕ್ಷ ರೂಪಾಯಿಯನ್ನು ಯಾವ ರೀತಿ ಕೊಟ್ಟಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ಈ ವಿಚಾರವನ್ನು ಕೃಷ್ಣಯ್ಯ ಶೆಟ್ಟಿಯವರು ಹೇಳಿದ್ದರಿಂದ ಹೇಳುತ್ತಿದ್ದೇನೆ. ಕರಾರು ಪತ್ರದಲ್ಲಿ 46 ಲಕ್ಷ ಹಣದ ಬಗ್ಗೆಯು ಸಹ ಷರಾ ಇರುವುದಿಲ್ಲ. ಈ ಪ್ರಕರಣದ ಚೆಕ್ ನನ್ನ ಸಮಕ್ಷಮ ಕೊಟ್ಟಿರುವುದಿಲ್ಲ. ಇದು ಹೋಟೆಲ್ ಪರ್ಚೆಸ್ ಮಾಡಿದ ಪ್ರಕರಣ ಆಗಿರುತ್ತದೆ. ಇದು ಸಿವಿಲ್ ಕೇಸು ಆಗಿರುತ್ತದೆ. ಕೃಷ್ಣಯ್ಯ ಶೆಟ್ಟಿ ಯವರು ನನಗೆ 10 ರಿಂದ 25 ವರ್ಷಗಳಿಂದ ಪರಿಚಯ ಇರುತ್ತಾರೆ. ಮಾರಾಟ ಆಗಿದ್ದು ಟೋಕನ್ ಅಡ್ವಾನ್ಸ್ ಕೊಟ್ಟ 3 – 4 ತಿಂಗಳ ನಂತರ.

6. ಕರಾರಿನ ದಿನಾಂಕ 27-01-2023. ಈ ಪೂರ್ವದಲ್ಲಿ ಬೆಲೆಯನ್ನು ನಿಗದಿ ಪಡಿಸಿಕೊಂಡಿದ್ದೇವು. ಮಾರಾಟ ಆಗಿರುವುದಿಲ್ಲ. ಆ ಹೋಟೆಲ್ ನ ವ್ಯವಹಾರವನ್ನು ದಿನಾಂಕ 27-01-2023 ರ ಮಧ್ಯಾಹ್ನದವರೆಗೆ ಕೃಷ್ಣಯ್ಯ ಶೆಟ್ಟಿ, ರಿಜಿಸ್ಟ್ರೇಶನ್ ಆದ ನಂತರ ಸುಜಾತರವರು ನಡೆಸಲು ಶುರು ಮಾಡಿರುತ್ತಾರೆ. ಕೃಷ್ಣಯ್ಯ ಶೆಟ್ಟಿ ಹಾಗೂ ಸುಜಾತರವರ ನಡುವೆ ಆದ ವ್ಯವಹಾರದ ಬಗ್ಗೆ ಏನು ಗೊತ್ತಿರುವುದಿಲ್ಲ ಎಂದರೆ ಸರಿಯಲ್ಲ. ಅವರಿಬ್ಬರ ನಡುವೆ ಆದ ವ್ಯವಹಾರಕ್ಕೆ ನಾನು ಸಹಿ ಮಾಡಿರುವುದಿಲ್ಲ ಎಂದರೆ ಕರಾರು ಪತ್ರಕ್ಕೆ ಸಹಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ಕರಾರು ಪತ್ರಕ್ಕೆ ಸಹಿ ಮಾಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಏನು ಮಾಹಿತಿ ಗೊತ್ತಿಲ್ಲದಿದ್ದರೂ ಸಹ ಕೃಷ್ಣಯ್ಯ ಶೆಟ್ಟಿ ನನ್ನ ಆತ್ಮೀಯರಾಗಿದ್ದರಿಂದ ಆತನಿಗೆ ಸಹಾಯ ಮಾಡುವ ಸಲುವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಕರಾರು ಆದ ನಂತರವೂ ಸಹ ಆರೋಪಿತರು 2 ಬಾರಿ ಹಣ ಕೊಟ್ಟಿರುತ್ತಾರೆ ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ಮುಖ್ಯ ವಿಚಾರಣೆಯಲ್ಲಿ ಹೇಳಿದ ವಿಚಾರಗಳು ಸುಳ್ಳು ಎಂದರೆ ಸರಿಯಲ್ಲ.

ಮರು ವಿಚಾರಣೆ - ಇಲ್ಲ.

ಓ.ಹೇ.ಕೇ.ಸ.ಇದೆ

ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಗಿದೆ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಕುಂದಾಪುರ